# ದೇಶ ಬದಲಾದರೂ ಬದಲಾಗದ ಬದುಕು!



**ಕೀನ್ಯಾ (ಆಫ್ರಿಕಾ)**

ಫಾಸಿಲ್ ವರದಿ ಮತ್ತು ಡಿಎನ್‌ಎ ಸಾಕ್ಷಿಗಳು, ಮಾನವ ಜನಾಂಗದ ಹುಟ್ಟು ಆಫ್ರಿಕಾ ಮಹಾದ್ವೀಪದಲ್ಲಾಗಿತ್ತು, ಕ್ರಮೇಣ ಮಾನವ ಈ ಮಹಾದ್ವೀಪವನ್ನು ದಾಟಿ ವಿಭಿನ್ನ ಮಹಾದ್ವೀಪಗಳಲ್ಲಿ ವ್ಯಾಪಿಸಿದ್ದ ಎಂದು ಹೇಳುತ್ತವೆ. ಆಫ್ರಿಕಾದಲ್ಲಿ ಆಹಾರ ಮತ್ತು ನೀರಿನ ಅಭಾವದಿಂದಾಗಿ ಮಾನವ ಬೇರೆಡೆಗೆ ಹೋಗಬೇಕಾಯಿತು. ಹಾಗೆ ನೋಡಿದರೆ ಪ್ರವಾಸದ ಪ್ರಕ್ರಿಯೆ ಹೊಸ ಸಂಗತಿ ಏನಲ್ಲ. ಕಾಲಕ್ರಮೇಣ ಇದರಲ್ಲಿ ಹೊಸ ಹೊಸ ಆಯಾಮಗಳು ಕೂಡಿಕೊಳ್ಳುತ್ತಾ ಹೋದವು; ಆದರೆ ಸ್ಥಳ ಪರಿವರ್ತನೆ, ಪ್ರವಾಸ ಅಥವಾ ಭೂಮಂಡಳೀಕರಣ ಜಗತ್ತಿನಲ್ಲಿ ಸದಾ ಕಾಲದಿಂದಲೂ ಇತ್ತು.

'ಇಂದಿನ ಗ್ಲೋಬಲೈಸೇಶನನ್ನು ನಾವು ಯಾವ ಸಂದರ್ಭದಲ್ಲಿ ಉಪಯೋಗಿಸುತ್ತೇವೆಯೋ, ಅದು ಪ್ರತ್ಯೇಕ' ಎಂದು ಪಾಲ್ ಹೇಳುತ್ತಿದ್ದಾನೆ. 'ಮೊದಲು ಜನ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವಾಗ ತಮ್ಮ ಸಂಸ್ಕೃತಿ, ಧರ್ಮ ಮತ್ತು ಕೌಶಲ್ಯವನ್ನು ತೆಗೆದುಕೊಂಡು ಹೋಗುತ್ತಿದ್ದರು. ಇಂದಿನ ಗ್ಲೋಬಲೈಸೇಶನ್ ಐಟಿ, ಟ್ರೇಡ್, ಇಂಟರ್‌ನೆಟ್ ಮತ್ತು ಮೀಡಿಯಾದೊಂದಿಗೆ ಕಲೆತಿದೆ.'

'ಪಾಲ್, ನಿಜ ಹೇಳಿದಿರಿ. ಕಥೆಯನ್ನು ಮುಂದುವರಿಸಲೇ?'

'ಯಸ್ ಪ್ಲೀಸ್'.

ನಾನು ಪತಿ ಮತ್ತು ಪುತ್ರನೊಂದಿಗೆ ವಿದೇಶದಲ್ಲಿದ್ದೆ, ಆದರೂ ಒಂಟಿತನ ತುಂಬಾ ತೀಕ್ಷ್ಣ ಎಂದು ಅನ್ನಿಸಿತು. ಆದರೆ ಹೊಸ ಭರವಸೆ, ಹೊಸ ರೀತಿಯಲ್ಲಿ, ಹೊಸ ವಾತಾವರಣದಲ್ಲಿ ನನ್ನ ಜೀವನವನ್ನು ಸಾಗಿಸಲು ಆರಂಭಿಸಿದೆ. ಇಲ್ಲಿ ಕಪ್ಪು ಆಫ್ರಿಕನ್‌ರ ಗುಂಪಿತ್ತು, ಬಿಳಿ ಯೂರೋಪಿಯನ್ ವಂಶದವರ ಗುಂಪೂ ಕಡಿಮೆಯಿರಲಿಲ್ಲ; ಇವರನ್ನು ವೈಟ್ ಕೀನ್ಯನ್ ಎನ್ನಲಾಗುತ್ತಿತ್ತು. ಒಂದು ವಿಶಾಲ ಭಾರತೀಯ ಸಮುದಾಯವೂ ಇತ್ತು, ಹೀಗಾಗಿ ಅನೇಕ ಭಾರತೀಯ ಸಂಸ್ಥೆಗಳು ಮತ್ತು ಸಮಿತಿಗಳಿದ್ದವು. ಸಾಮಾಜಿಕ, ಆರ್ಥಿಕ ಸ್ಪರ್ಧೆಗಳು, ಜನರ ಶ್ರಮ, ಮಿತ್ರತ್ವ ಮತ್ತು ವೈವಿಧ್ಯ – ಹೀಗೆ ಅನೇಕ ವಿಷಯಗಳು ಭಾರತದೊಂದಿಗೆ ಕಲೆತಿರುವಂತೆ ನನಗೆ ಕಂಡು ಬಂತು.

ಭಾಷೆ, ಸಾಂಸ್ಕೃತಿಕ ಮತ್ತು ಐತಿಹಾಸಿಕ ದೃಷ್ಟಿಯಿಂದ ಇಲ್ಲಿಯ ಜನಸಂಖ್ಯೆಯನ್ನು ಎರಡು ಭಾಗಗಳಾಗಿ, ಅಂದರೆ ಸ್ವಾಹಿಲಿ ಮಾತನಾಡುವವರು ಮತ್ತು ಇಂಗ್ಲಿಷ್ ಮಾತನಾಡುವವರು ಎಂದು ವಿಭಾಗ ಮಾಡಬಹುದು. ಎರಡೂ ಭಾಷೆಗಳು ರಾಜ್ಯದ ಭಾಷೆಯಾಗಿದ್ದವು. ನಾನು ಇಂಗ್ಲಿಷನ್ನು ಈ ಮೊದಲೇ ಮಾತನಾಡುತ್ತಿದ್ದೆ. ಇಲ್ಲಿಗೆ ಬಂದು ನಾನು ಸ್ವಾಹಿಲಿ ಭಾಷೆಯಲ್ಲಿ ಗೋತಾ ಹೊಡೆದೆ. ಸ್ವಾಹಿಲಿ ತುಂಬಾ ಸರಳ ಭಾಷೆಯಾಗಿದ್ದು, ಇದನ್ನು ಕಲಿಯುವುದು ಕಷ್ಟದ ಕೆಲಸವಾಗಿರಲಿಲ್ಲ.

'ಸ್ವಾಹಿಲಿಯಲ್ಲಿ ಏನಾದರೂ ಹೇಳಿ' ಪಾಲ್ ಮಧ್ಯಪ್ರವೇಶಿಸಿದ.

'ಏನು ಕೇಳಲು ಬಯಸುತ್ತೀರಿ?'

'ಹಲೋ ಅಂತ ಹೇಳಿ!'

'ಜಂಬೋ!'

'ಥ್ಯಾಂಕ್ ಯೂ!'

'ಅಸಾಂತೆ!'

'ಐ ಲವ್ ಯೂ'

ನಾನು ಮೆಲ್ಲನೆ ನಗುತ್ತಾ ಹೇಳಿದೆ, 'ನಾಕುಪೆಂದಾ ಸಾನಾ – ಐ ಲವ್ ಯೂ ವೆರಿ ಮಚ್!'

ಪಾಲ್ ಸಹ ನಗುತ್ತಿದ್ದಾನೆ.

ಅಬ್ರಾಹಮ್ ಮೋಮ್ಬಾಸಾದಲ್ಲಿ, ಒಂದು ಇಂಟರ್‌ನ್ಯಾಶನಲ್ ಪ್ರೊಟೆಸ್ಟೆಂಟ್ ಚರ್ಚ್‌ನಲ್ಲಿ ಕೆಲಸವನ್ನು ವಹಿಸಿಕೊಂಡ. ಇಲ್ಲಿ ನಮ್ಮ ಜೀವನದ